ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 80-88
©IIMRD, Mysuru
IIMRD JOURNALS
www.iimrd.com

# ಬುಕ್ಕರಾಯನ ಆಳ್ವಿಕೆಯ ಕಾಲದ ಎರಡು ಶಾಸನಗಳ ವಿಮರ್ಶೆ

ಡಾ. ಗುರುರಾಜ ಎಸ್. ನವಲಗುಂದ[1]

**ಪೀಠಿಕೆ:**

ಮಧ್ಯಕಾಲೀನ ಕರ್ನಾಟಕದಲ್ಲಿ ವಿಭಿನ್ನ ಮತಗಳ ನಡುವೆ ಅಧಿಕಾರಾಕಾಂಕ್ಷೆಯ ಸ್ಪರ್ಧೆ ಇರುವುದನ್ನು ಆ ಸಂದರ್ಭದ ಶಾಸನಗಳು ಹಾಗೂ ಸಮಕಾಲೀನ ಧರ್ಮಕೇಂದ್ರಿತ ಪಠ್ಯಗಳು ತೆರೆದಿಡುತ್ತವೆ. ಕನ್ನಡ ನೆಲೆಯಲ್ಲಿ ಅರಳದ ಧರ್ಮಗಳು ಭಾರತದ ಉತ್ತರದಿಂದ ಅಥವಾ ದಕ್ಷಿಣ ಭಾಗದಿಂದ ಇಲ್ಲಿಗೆ ಆಗಮಿಸಿ, ಇಲ್ಲಿಯ ಸಾಮ್ರಾಜ್ಯಶಾಹಿಗಳನ್ನು ತಮ್ಮ ಇಚ್ಛೆಗೆ ಬಂದಂತೆ ಬಳಕೆ ಮಾಡಿಕೊಂಡಿರುವ ರೀತಿಯನ್ನು ಗಮನಿಸಿದಾಗ ವಾಸ್ತವವಾಗಿ ಧಾರ್ಮಿಕವಾದ ಸ್ಥಳೀಯರನ್ನು ಸಹಜವಾಗಿ ಕೆರಳಿಸಿರುವುದರಲ್ಲಿ ಅನುಮಾನವೇ ಬೇಡ. ಆ ಕಾರಣಕ್ಕಾಗಿಯೇ ಇರಬೇಕು, ಕ್ರಿಸ್ತಶಕ 11–12ನೆಯ ಶತಮಾನದಲ್ಲಿ ಜನಸಾಮಾನ್ಯರು ವಚನಗಳ ಮೂಲಕ ತಮ್ಮದೇ ಅನುರೂಪವಾದ ಧರ್ಮವನ್ನು ಕಟ್ಟಲು ಪ್ರಯತ್ನಿಸಿರುವುದು.

ಅಂದಿನ ಸಂದರ್ಭದ ವಾಸ್ತವಗಳನ್ನು ಶಾಸನಗಳು ಮತ್ತು ಸಮಕಾಲೀನ ಸಾಹಿತ್ಯ ಪಠ್ಯಗಳು ಕಟ್ಟಿಕೊಟ್ಟ ಮಾದರಿಯನ್ನು ಗಮನಿಸಿದಾಗ ಅವು ನಾಡಿನಲ್ಲಿದ್ದ ಸ್ಥಳೀಯ ಲೋಕಾಯತ, ಕಾಳಾಮುಖ, ಕೌಳ ಸೇರಿದಂತೆ ಅನೇಕ ಧರ್ಮಗಳ ಅಸ್ತಿತ್ವವನ್ನೇ ಅಲುಗಾಡಿಸಿರುವುದು ಕಂಡುಬರುತ್ತದೆ. ಕ್ರಿಸ್ತಶಕ 7–8ನೆಯ ಶತಮಾನದಲ್ಲಿದ್ದ ಪ್ರಮುಖ ಧರ್ಮವಾದ ಜೈನಧರ್ಮವು ಇಂತಹ ಸಂಶಯಕ್ಕೆ ಕಾರಣವಾಗುತ್ತದೆ. ಯಾವುದೇ ಒಂದು ಧರ್ಮ 'ಆಯ್ಕೆ' ಮತ್ತು 'ಪ್ರತ್ಯೇಕತೆ'ಯ ಹಿನ್ನೆಲೆಯಲ್ಲಿ ಒಂದು ವ್ಯವಸ್ಥೆಯನ್ನು ಸಂಘರ್ಷದೊಂದಿಗೆ ಪ್ರವೇಶಮಾಡುವುದು ಸಹಜ. ಈ ಹಿನ್ನೆಲೆಯಲ್ಲಿ ಜೈನಧರ್ಮವು ಕೂಡ ಭಿನ್ನವಾಗಿ ಕಾಣಸಿಗುವುದಿಲ್ಲ. ಆದರೆ ಈ ಧರ್ಮದ ರಾಜಕೀಯ ಹೇಗಿದೆಯೆಂದರೆ ಧರ್ಮ ಎಂದರೆ ಅದು ಜೈನಧರ್ಮ ಎಂದು, ಉಳಿದ ಧರ್ಮಗಳು ಕುಧರ್ಮಗಳು ಎಂಬ ನಿರ್ಧಾರದೊಂದಿಗೆ ಪ್ರವೇಶ ಮಾಡಿರುವಂತೆ ಆ ಧರ್ಮದ ಪಠ್ಯಗಳ ಆಂತರ್ಯದಲ್ಲೇ ನಿರ್ಧಾರವಾದಂತೆ ಕಂಡುಬರುತ್ತದೆ. ಇದು ರಾಜಪ್ರಭುತ್ವದಲ್ಲಿ ಮಾನ್ಯತೆಯನ್ನು ಪಡೆದುಕೊಳ್ಳಲು ಈ ಧರ್ಮಗಳು ತಮ್ಮ ತಮ್ಮ ಧಾರ್ಮಿಕ ಪರಿವ್ಯಾಪ್ತಿಯಲ್ಲಿ ಹೇಗೆ ತಮ್ಮ ಧರ್ಮ ಶ್ರೇಷ್ಠ ಎಂಬುದನ್ನು ಪ್ರಚುರಪಡಿಸಬೇಕಾಗಿತ್ತು. ಈ ರೀತಿಯಲ್ಲಿ ವ್ಯವಸ್ಥಿತವಾದ ಸಂಚೊಂದು ಅಸಾಂವಿಧಾನಿಕವಾಗಿ ರೂಪುಗೊಳ್ಳುತ್ತಿತ್ತು. ಆ ಮೂಲಕ ಪ್ರಭುತ್ವಾಧಿಕಾರದಲ್ಲಿ ಭಾಗಿಯಾಗಲು ಅನ್ಯಧರ್ಮಗಳೊಂದಿಗೆ ಅಧಿಕಾರ ಮತ್ತು ಆರ್ಥಿಕ ಕೇಂದ್ರಿತ ಸಂಘರ್ಷಗಳು ನಡೆಯುತ್ತಿದ್ದವು.

---

[1] *ಪೋಸ್ಟ್ ಡಾಕ್ಟರಲ್ ಫೆಲೋ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ*

ಕರ್ನಾಟಕದಲ್ಲಿ ಬೌದ್ಧಧರ್ಮ, ಜೈನಧರ್ಮ ಹಾಗೂ ಶೈವಧರ್ಮಗಳ ಮಧ್ಯದ ಸಂಘರ್ಷ ಹಾಗೂ ಅವುಗಳ ಪರಿಸ್ಥಿತಿಯನ್ನು ಇಡೀ ಕರ್ನಾಟಕದ ಚರಿತ್ರೆ ಉದ್ದಕ್ಕೂ ಕಾಣಸಿಗುತ್ತದೆ. ಶತಮಾನಗಳಿಂದ ನಡೆದುಕೊಂಡು ಬಂದ ಸಂಘರ್ಷವು ಬೌದ್ಧಧರ್ಮದ ವಿರುದ್ಧ ಜೈನಧರ್ಮ, ಜೈನಧರ್ಮದ ವಿರುದ್ಧ ಕಾಳಾಮುಖ ಶೈವಧರ್ಮ ಹೀಗೆ ಧರ್ಮಗಳು ಪರಸ್ಪರ ತಮ್ಮ ಅಸ್ತಿತ್ವಕ್ಕಾಗಿ ಹೋರಾಟವನ್ನು ಮಾಡಿರುವುದನ್ನು ನೋಡಬಹುದು. ಕಾಳಾಮುಖಶೈವರ ದಾಷ್ಟ್ಯದ ವೋಗಕ್ಕೆ ದುರ್ಬಲವಾದ ಜೈನಧರ್ಮವು ಮುಂದೆ ವೈಷ್ಣವರ ಪ್ರಾಬಲ್ಯದ ಎದುರು ಕುಗ್ಗಿಹೋಗಿದೆ. ಕಲಚೂರಿಗಳ ಧರ್ಮವಾದ ಕಾಳಾಮುಖ ಶೈವರ ಒತ್ತಡದಲ್ಲಿ ಕನಲಿಹೋಗಿದ್ದ ಜೈನಧರ್ಮವು ಹೊಯ್ಸಳರ ಕಾಲದಲ್ಲಿ ಮತ್ತೆ ಮತ್ತೆ ಚಿಗುರೊಡೆಯಲು ಪ್ರಯತ್ನಿಸುತ್ತಿತ್ತು. ಆದರೆ ಅವರ ಕನಸು ಮುಂದೆಂದೂ ನನಸಾಗುವ ಹಂತ ತಲುಪಲಿಲ್ಲ. ಕಾರಣ ಹೊಯ್ಸಳರ ಕಾಲದಲ್ಲಿ ವೈಷ್ಣವಧರ್ಮವು ರಾಮಾನುಜರ ಪ್ರಭಾವದಿಂದ ನಾಡಿನಲ್ಲಿ ಹಲವಾರು ಬದಲಾವಣೆಗಳು ನಡೆದವು. ಕರ್ನಾಟಕದಲ್ಲಿ ಎಲ್ಲಾ ಕಾಲಘಟ್ಟದಲ್ಲಿ ಒಂದು ಸುಳ್ಳು ಚರಿತ್ರೆಯು ನಿರ್ಮಾಣವಾಗುತ್ತಿರುತ್ತದೆ. ಸತ್ಯ ಚರಿತ್ರೆಯೊಂದಿಗೆ ಅದು ಸದಾ ಹಿಂಬಾಲಿಸುತ್ತಿರುತ್ತದೆ. ರಾಮಾನುಜರು ಹೊಯ್ಸಳ ರಾಜ್ಯಕ್ಕೆ ಬಂದ ತಕ್ಷಣ ಹೊಯ್ಸಳ ವಿಷ್ಣುವರ್ಧನನು ಅವರಿಗೆ ಭವ್ಯಸ್ವಾಗತ ನೀಡಿದ್ದು, ಅದು ಸ್ಥಳೀಯವಾಗಿ ಕಾಳಾಮುಖರ ಒತ್ತಡದಲ್ಲಿ ಕನಲಿ ಹೋಗಿದ್ದ ಜೈನರ ಶೋಷಣೆ ಎಂದಲ್ಲ. ಆದರೆ ಈ ರೀತಿಯ ಹಲವು ಕತೆಗಳು ಹಲವಾರು ಹುಟ್ಟಿಕೊಂಡಿವೆ. ಅವುಗಳೆಲ್ಲ ಸತ್ಯವಲ್ಲ. ಆದರೆ ಒಂದಂತೂ ನಿಜ. ಜೈನರು ರಾಜಕೀಯವಾಗಿ ಅಥವಾ ರಾಜಪ್ರಭುತ್ವದ ಆಶ್ರಯದೊಂದಿಗೆ, ಗಂಗರ ಮೇಲೆ ಇದ್ದ ಧಾರ್ಮಿಕ ಹಿಡಿತವನ್ನು ಮುಂದೆ ಕಲ್ಯಾಣ ಚಾಲುಕ್ಯರಾಗಲಿ ಅಥವಾ ಅವರ ನಂತರದಲ್ಲಿ ಕಲಚೂರಿಗಳಾಗಲಿ, ಹೊಯ್ಸಳರು ಹೀಗೆ ಯಾರ ಮೇಲೆಯೂ ಧಾರ್ಮಿಕ ಹಿಡಿತ ಸಾಧಿಸಲಾಗಲಿಲ್ಲ. ಇದು ಅವರ ಸಮಾಜದ ಮೇಲಿನ ಧಾರ್ಮಿಕ ಹಾಗೂ ಆರ್ಥಿಕವಾದ ದೌರ್ಬಲ್ಯದ ಸಂಕೇತವಾಗಿದೆ.

**ಶ್ರವಣಬೆಳಗೊಳ ಮತ್ತು ಕಲ್ಯ ಶಾಸನಗಳು**

ಆದರೆ ಉತ್ತರ ಕರ್ನಾಟಕದಲ್ಲಿ ಕಾಳಾಮುಖ ಶೈವಧರ್ಮದ ಆಕ್ರಮಣವನ್ನು ಎದುರಿಸಿ ನಿಲ್ಲಲಾಗದ ಜೈನಧರ್ಮಕ್ಕೆ ಹೊಯ್ಸಳರ ಸಾಮ್ರಾಜ್ಯದ ಭಾಗದಲ್ಲಿ ಶ್ರೀವೈಷ್ಣ ಧರ್ಮದ ಪ್ರಚಾರದಿಂದಾಗಿ ಮತ್ತೊಂದು ಆಘಾತವನ್ನು ಎದುರಿಸುವ ಸನ್ನಿವೇಶವು ಅನಿವಾರ್ಯವಾಗಿ ನಿರ್ಮಾಣವಾಗಿತ್ತು. ಹೊಯ್ಸಳರ ಭಾಗದಲ್ಲಿ ಬಸದಿಗಳ ನಾಶವಾದುದರ ಬಗೆಗೆ ಶಾಸನಗಳಲ್ಲಿ ಸ್ಪಷ್ಟ ಉಲ್ಲೇಖಗಳು ಕಂಡುಬರುವುದಿಲ್ಲ. ಆದರೂ ಜೈನಧರ್ಮವೂ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ವಿಷ್ಣುದೇವಾಲಯಗಳ ನಿರ್ಮಾಣ, ಅಗ್ರಹಾರಗಳ ನಿರ್ಮಾಣ ಇವು ಶ್ರೀವೈಷ್ಣವರನ್ನು ಹೆಚ್ಚು ಹೆಚ್ಚು ಆಕರ್ಷಿಸಲು ಸಾಧ್ಯವಾಯಿತು. ಹೊಯ್ಸಳ ಸೋಮೇಶ್ವರನ ಪ್ರಧಾನನೂ ಹಿರಿಯ ಮಾಣಿಕ್ಯ ಬಂಡಾರಿಯೂ ಆಗಿದ್ದ ರಾಮದೇವನಾಯಕನ ಸಮ್ಮುಖದಲ್ಲಿ ಬೆಳ್ಗೊಳದ ಆಚಾರ್ಯರಾದ ನಯಕೀರ್ತಿದೇವರು ಗೊಮ್ಮಟಪುರದ ಎಲ್ಲ ನಖರಗಳಿಗಾಗಿ ಹೊರಡಿಸಿದ ಶಾಸನ ಹೀಗಿದೆ (ಕ್ರಿಸ್ತಶಕ 13ನೆಯ ಶತಮಾನ) ಗೊಮ್ಮಟಪುರದಲ್ಲಿ ವಾಸ ಮಾಡುವವರು ಆಚಾರ್ಯರಿಗೆ ಎಂಟು ಹಣ ನೀಡಬೇಕು. ಈ ಸ್ಥಳದ ನ್ಯಾಯಾನ್ಯಾಯವನ್ನು ಆಚಾರ್ಯರೇ ಬಗೆಹರಿಸುತ್ತಾರೆ. “ಈ ಶಾಶನಮರ್ಯ್ಯಾದೆಯಂ ಮೀಱಿದವರು ಧರ್ಮ್ಮಸ್ಥಳವ ಕೆಡಿಸಿದವರು ಈ ತೀರ್ತ್ಥದ ನಖರಂಗಳೊಳಗೆ ಒಬ್ಬರಿಬ್ಬರು ಗ್ರಾಮಿಣಿಗಳಾಗಿ ಆಚಾರ್ಯರಿಗೆ ಕವುಟಿಲ್ಯಬುದ್ಧಿಯಂ ಕಲಿಸಿ ಒಂದಕೊಂದ ನೆನದು ತೊಳಸಾಟವಂ ಮಾಡಿ ಹಾಗೆ ಬೆಳೆಯನಳಿಹಿ

ಬೇಡಿಕೊಳ್ಳಿಯೆಂದು ಆಚಾರ್ಯರಿಗೆ ಮನಂಗೊಟ್ಟರೆ ಅವರು ಸಮಯದ್ರೋಹರು ರಾಜದ್ರೋಹರು ಬಣಂಜಿಗ ಪಗೆಯರು, ನೆತ್ತಗೆಯರು, ಕೊಲೆ ಕವರ್ತ್ತಗೊಡೆಯರು. ಇದನಱುದು ನಖರಂಗಳು ಉಪೇಕ್ಷಿಸಿದರಾದರೆ ಈ ಧರ್ಮದ ನಖರಂಗಳೇ ಕೆಡಿಸಿದವರಲ್ಲದೆ ಆಚಾರ್ಯ್ಯರುಂ ದುರ್ಜ್ಜನರುಂ ಕೆಡಿಸಿದವರಲ್ಲ. ನಖರಂಗಳ ಅನುಮತವಿಲ್ಲದೆ ಒಬ್ಬರಿಬ್ಬರು ಗ್ರಾಮಣಿಗಳು ಆಚಾರ್ಯ್ಯರ ಮನೆಯನಕ್ಕೆ ಅರಮನೆಯನಕ್ಕೆ ಹೊಕ್ಕಡೆ ಸಮಯದ್ರೋಹರು" (ಮಾರ್ಗ: 4: ಕಲಬುರ್ಗಿ ಎಂ.ಎಂ.; ಪುಟ 120) ಈ ಶಾಸನದಲ್ಲಿ ಉಲ್ಲೇಖವಾಗಿರುವ ಮಾಹಿತಿಯು ಶ್ರವಣಬೆಳ್ಗೊಳಕ್ಕೆ ನಖರ (ವ್ಯಾಪಾರಿ) ಗಳಿಂದ, ಅದು ಬಣಂಜಿಗ ಪಗೆಯರು, ನೆತ್ತಗೆಯರು ಇತ್ಯಾದಿ ಕೃತ್ಯ ಹಾಗೂ ಗ್ರಾಮಣಿ (ಗ್ರಾಮಸ್ಥ) ಯರಿಂದ ಆಗುತಲಿದ್ದ ಆತಂಕಗಳನ್ನು ಗಮನಿಸಿ ಈ ರೀತಿಯಾಗಿ ವಿವರಿಸುತ್ತದೆ. ಅಲ್ಲದೇ, ಜೈನರ ಪ್ರಾಬಲ್ಯ ಕುಸಿದಿದ್ದನ್ನು ಮನಗಂಡ ಶ್ರೀವೈಷ್ಣವ ವ್ಯಾಪಾರಸ್ಥರು ಅವರನ್ನು ತಮ್ಮ ಇಚ್ಛೆಗನುಸಾರ ಬಳಸಿಕೊಳ್ಳಲು ಹೇಸಲಿಲ್ಲ.

ಹೀಗೆ ಮೊದಲು ಶೈವಧರ್ಮದ ಆಕ್ರಮಣಗಳಿಂದ ಕನಲಿ, ಅಲ್ಪಸ್ವಲ್ಪ ಉಸಿರಾಡುತ್ತಿದ್ದ ಜೈನಧರ್ಮಕ್ಕೆ ಕ್ರಿಸ್ತಶಕ 1368ರಲ್ಲಿ ಶ್ರವಣಬೆಳಗೊಳದಲ್ಲಿ ಶ್ರೀವೈಷ್ಣವರು ನೇರ ಎದುರಾಳಿಗಳಾಗಿದ್ದು ಶಾಸನದಲ್ಲಿ ಉಲ್ಲೇಖಗೊಂಡಿದೆ. ಇದು ವಿಜಯನಗರದ ಅರಸ ಬುಕ್ಕನ ಕಾಲದಲ್ಲಿ ಈ ಒಂದು ಘರ್ಷಣೆ ನಡೆಯುತ್ತದೆ (ಎಕ–2, ಶ್ರವಣ 475). ಘರ್ಷಣೆಯನ್ನು ಗಮನಿಸಿ ರಾಜಿ ಮಾಡಿಸುವ ಪ್ರಯತ್ನ ನಡೆಯುತ್ತದೆ.

ಶ್ರವಣಬೆಳಗೊಳದಲ್ಲಿ ಉಲ್ಲೇಖಿತವಾದ ಜೈನ ವೈಷ್ಣವರ ಮಧ್ಯದ ಘರ್ಷಣೆಯನ್ನು ಹಲವಾರು ವಿದ್ವಾಂಸರು ಇದು ಸಾಮರಸ್ಯ ಸೂಚಿಸುವ ಶಾಸನವೆಂತಲೇ ಬಿಂಬಿಸಿದ್ದಾರೆ. ಆ ಕಾಲದಲ್ಲಿ ಜೈನ ವೈಷ್ಣವರ ಮಧ್ಯದಲ್ಲಿ ನಡೆದ ಮತೀಯ ವೈಷಮ್ಯವನ್ನು ಬುಕ್ಕರಾಯನು ಅಳಿಸಿ ಹಾಕಿ ಎರಡು ಕೋಮಿನವು ಸ್ನೇಹ ಸೌಹಾರ್ದತೆಯಿಂದ ಬಾಳಲು ಅವಕಾಶ ಮಾಡಿಕೊಟ್ಟನು. ಅವನ ಕಾಲದಲ್ಲಿ ಎಲ್ಲ ವರ್ಗದ ಜನರು ಸುಖಸಂತೋಷದಿಂದ ಬಾಳ್ವೆ ನಡೆಸುತ್ತಿದ್ದರು (ವಿಜಯನಗರ ಅಧ್ಯಯನ ಸಂ–13. ಲೇ. ಒಂದನೇ ಬುಕ್ಕರಾಯನ ಧಾರ್ಮಿಕ ಶಾಸನಗಳು: ನಾಗರಾಜು ಡಿ.ಎಂ.; ಪುಟ 85). ನಿಜವಾಗಲೂ ಆರಂಭದ ಕಾಲಘಟ್ಟದಲ್ಲಿ ಎಲ್ಲ ವರ್ಗದ ಜನರು ಸುಖಸಂತೋಷದಿಂದ ಬಾಳ್ವೆ ನಡೆಸುತ್ತಿದ್ದರೆ? ಅದೇ ಕಾಲದ ಕಲ್ಯ ಗ್ರಾಮದಲ್ಲಿ ದೊರೆತ ಶಾಸನವು ವೈಷ್ಣವ ಮತ್ತು ಜೈನರ ಮಧ್ಯದ ಸಂಘರ್ಷವನ್ನು ಸೂಚಿಸಿರುವುದು ಸಂದೇಹಕ್ಕೆ ಎಡೆಮಾಡಿಕೊಡುತ್ತದೆ. ಬಹುಶಃ ಶ್ರವಣಬೆಳಗೊಳದಲ್ಲಿ ಹಾಕಿಸಿದ ಶಾಸನದ ಪ್ರತಿಯನ್ನು ಮಹತ್ವದ ಅಂಶವಾಗಿ ಪರಿಗಣಿಸಿ ಮತ್ತೊಂದು ಪ್ರತಿಯನ್ನು ಹಾಕಿಸಲಾಗಿದೆ. ಕ್ರಿಸ್ತಶಕ 1368 ರಲ್ಲಿ ಹಾಕಿಸಿದ ಕಲ್ಯ ಶಾಸನ (ಎಕ (ರೈ)–9, ಮಾಗಡಿ 18) ವು ಮೊದಲು ಹಾಕಿಸಿದ್ದಾಗಿದೆ. ಸುಮಾರು 5 ವಾರಗಳ ನಂತರದಲ್ಲಿ ಶ್ರವಣಬೆಳಗೊಳದಲ್ಲಿ ಇದರ ಪ್ರತಿಯೊಂದನ್ನು ಹಾಕಿಸಲಾಯಿತು. ಈ ಎರಡು ಶಾಸನಗಳು ಸಾಮಾನ್ಯವಾಗಿ ಹೇಳುವ ಅಂಶಗಳು ಒಂದೇ ಆಗಿದ್ದು, ಪ್ರಮುಖವಾದ ಒಂದು ಅಂಶದ ಮೇಲೆ ಕಲ್ಯ ಶಾಸನವು ಬೆಳಕು ಚೆಲ್ಲುತ್ತದೆ. ಆದರೆ ಶ್ರವಣಬೆಳಗೊಳ ಶಾಸನ (ಎಕ–2, ಶ್ರವಣ 475) ವು ಅದೇ ಪ್ರಮುಖ ಅಂಶವನ್ನು ಮರೆಮಾಚುತ್ತದೆ.

ಸಾಮಾನ್ಯವಾಗಿ ಎರಡು ಶಾಸನಗಳಲ್ಲಿ ಉಲ್ಲೇಖಿತ ಅಂಶಗಳನ್ನು ಗಮನಿಸುವುದಾದರೆ, 'ಶ್ರೀವೀರಬುಕ್ಕರಾಯಂ ಪ್ರಥ್ವೀರಾಜ್ಯಮಂ ಮಾಡುತ್ತಾ ಇರುವಲ್ಲಿ ಜೈನರಿಗೂ ಭಕ್ತರಿಗೂ ಸಂವಾದಮಾದಲ್ಲಿ'

(ಪೂರ್ವೋಕ್ತ: ಶ್ರವಣ 475) ಅನ್ಯಾಯವಾಗಿರುವುದನ್ನು ತಿಳಿಸುತ್ತದೆ. ಹಾಗಾದರೆ ಜೈನರಿಗೂ ವೈಷ್ಣವರಿಗೂ ನಡೆದ ಸಂವಾದವಾದರೂ ಏನು ಎಂಬುದನ್ನು ಯಾವ ಶಾಸನವೂ ಹೇಳುವುದಿಲ್ಲ. ಅದಕ್ಕೆ ದೇವಚಂದ್ರನು ತನ್ನ ರಾಜಾವಳಿ ಕಥಾಸಾರದಲ್ಲಿ ಈ ಘಟನೆಯನ್ನು ಕುರಿತು ಉಲ್ಲೇಖವನ್ನು ಮಾಡುತ್ತಾನೆ. ಅಲ್ಲದೇ ಈ ಘಟನೆಯೂ ಶ್ರವಣಬೆಳ್ಗೊಳದಲ್ಲಿಯೇ ನಡೆದ ಘಟನೆ ಎಂದು ತಿಳಿಸುತ್ತದೆ.

ದೇವಚಂದ್ರನ ರಾಜಾವಳಿ ಕಥೆಯಲ್ಲಿ ಶ್ರವಣಬೆಳ್ಗೊಳದಲ್ಲಿ ಜೈನರಿಗೂ ವೈಷ್ಣವರಿಗೂ ಘಟಿಸಿದ ಘಟನೆಯನ್ನು ಕುರಿತು "ಬುಸವಿಸೆಟ್ಟಿಯಂಬುಂಗೆ ಪೇಳ್ವುದುಂ, ಸಿಂಗಾಚಾರಿ ಎಂಬ ತರುಣ ಪ್ರಾಯದಹಂಕಾರಿಗೆ ನಿಮ್ಮ ಕಡೆ ತುಂಟಜನರು ನಮ್ಮ ಜಿನಾಲಯಂಗಳ ಘಾತಪಾತಮಂ ಮಾಡುತ್ತಿದ್ದಾರೆ. ಅವಿರಗೆ ಬುದ್ಧಿಹೇಳಿ ನಿಲಿಸುವುದೆ"ನೆ ಕುಚೇಷ್ಟೆಯಿಮ ಕುಹಕಂಗಳಂ ಮಾಡಿದನದಕ್ಕೆ...

ಕಪೀರಪಿಶ್ಚೋಕಾಪಿಶ। ಯೇನ ಮದೋನ್ಮತ್ತ ವೃಶ್ಚಿಕೇನಂ ಸಂದ

ಷ್ಟಮಪಿ ಚ ಪಿಶಾಚಗ್ರಸ್ತೋ। ಕಿಂ ಬ್ರೂಮಶ್ಚೇಷ್ಟಿತಂ ತಸ್ಯ॥

ಎಂಬುದರಿಂ "ಮಿಥ್ಯಾದೃಷ್ಟಿಗಿದು ಸ್ವಭಾವ"ಮೆಂದು ಬುಸವಿಶೆಟ್ಟಿಯೊರ್ವನೆ ರಾತ್ರಿಯೋಳ್ ಗಿರಿಯೊಳೊರಗೆ ಸಿಂಗಾಚಾರಿ ತೀಕ್ಷ್ಣ ಪುರುಷರಪ್ಪ ಹರಿದಾಸರ್ ಬಂದು ಕೊಲಲೆಂದು ಬರಲವರ್ಗೆ ಪೊಟ್ಟೆಶೂಲೆಯಂ ಕಾಣದೆ ಪೋದರು.

ರಣೇ ವನೇ ಶತ್ರುಜಲಾಗ್ನಿಮಧ್ಯೇ। ಮಹಾರ್ಣವೇ ಪರ್ವತಮಸ್ತಕೇ ವಾ

ಸುಪ್ತಂ ಪ್ರಮತ್ತಂ ವಿಷಮೇಸ್ಥಿತಂ। ವ ರಕ್ಷಂತಿ ಪುಣ್ಯಾನಿ ಪುರಾಕೃತಾನಿ॥

ಎಂಬುದರಿಂ ಮರುದಿವಸಂ ಶ್ರಾವಕವಿಪ್ಪರ್ ಸಹಿತಂ ಬಂದು ಸಿಂಗಾಚಾರಿಯಂ ಕಾಣೆ. ನಿಮ್ಮ ಜೈನಮತಮಂ ಕೆಡಿಸಬೇಕೆಂದು ನಮ್ಮ ಶಾಸ್ತ್ರವಿದೆ ಯೆನಲಾಗಿ ಜೈನಮತಮನಾವನಾದೊಡೆ ಪಾಲಿಪನಾತಂಗೆ ಸ್ವರ್ಗಮೋಕ್ಷಂ ಅದಕ್ಕಳುಪಿದಂಗನಂತ ಪಾಪ, ಇಹದ ಕೇಡು ಪರದೊಳ್ ನರಕದುಃಖ ತಪ್ಪದೆಂದಾ ವೈಶ್ಯಶ್ರಾವಕದ್ವಿಜರ ಪೇಳೆ, ಅದಕ್ಕೆ ದೃಷ್ಟ ಶ್ರುತಾನುಭವಂಗಳೈನೂರು ಶ್ಲೋಕಮಂ ಪೇಳೆ, ನಿಮ್ಮ ಮತಕ್ಕೆ ನೀವು ಬಲಾಮಾಡಿ ಶಾಸ್ತ್ರಮಂ ಮಾಡಿದ್ದೀರಿ ಎಂಬುದುಂ, ಬುಸವಿಸೆಟ್ಟಿಯು ಜಿನಮತಶಾಸ್ತ್ರಮೆ ಸತ್ಯಮುಳಿದ ಮತಂಗಳ ಶಾಸ್ತ್ರಂ ಮಿಥ್ಯಮಿದಕ್ಕೆ ನಾಂ ದಿವ್ಯಂ ಪಿಡಿವೆ, ನಿಮ್ಮ ಮತಂ ಸತ್ಯಮೆಂದು ಪಿಡಿಯಿರೆನೆ ಚರ್ಚಿಸಿ, ವೀರಬುಕ್ಕರಾಯನಾಸ್ಥಾನಕ್ಕೆ ಪೋಗಿ ಭಾಷಪತ್ರಿಕೆಯಂ ಬರೆದು, ಬುಸವಿಶೆಟ್ಟಿ ತಪ್ತಮಪ್ಪ ಲೋಹದ ಗುಂಡು ಜಾಜ್ವಲ್ಯಮಪ್ಪುದನೆರಡು ಕೈಯಿಂದೆತ್ತಿ ಪೆಗಲೊಳಿಟ್ಟುಕೊಂಡು ಎರಡು ಘಳಿಗೆವರಂ ಮೈಮೇಲಾಡಿಸಿ ನೆಲಕ್ಕಿಡಲಾ ಭೂಮಿಯೊಳುರಿಯುತ್ತಿರಲೆಲ್ಲರಾಶ್ಚರ್ಯಂಬಡೆ, ಸತ್ಯ ಮತವೆಂದು ನಿಶ್ಚಯಿಸಿ, ವೀರಬುಕ್ಕರಾಯಂ ತಿರುಮಲೆ ತಾತಯ್ಯಗಳ್ ಮೊದಲಾದೆಲ್ಲಾ ವೈಷ್ಣವರಂ ಬರಿಸಿ, ನಿಮ್ಮ ಜನರು ಜೈನರ ಮೇಲೆ ಮಾಸಿದನ್ಯಾಯಮಂ ಪೇಳೆ, ವಿಷಣ್ಣಚಿತ್ತರಾಗಿ ಎಲ್ಲರು ಜೈನಮತಮೇ ಸತ್ಯಮೆಂದು ತಿಳಿದು, ತಾವು ಮಾಡಿದ ಕೃತ್ಯಕ್ಕೆ ಕೊಕ್ಕರಿಸೆ, ಶ್ರೀವೈಷ್ಣವರೊಳ್ ಜೈನರಂ ಕೂಡಿಸಿ ಶಿಲಾಶಾಸನಮಂ ಬರೆಸಿದರದೆಂತೆಂದೊಡೆ–

ಈ ರೀತಿಯಾಗಿ ಎರಡು ಧರ್ಮಗಳ ನಡುವೆ ನಡೆದ ವಾದವಿವಾದಗಳನ್ನು ಕಲ್ಯ ಅಥವಾ ಶ್ರವಣಬೆಳಗೊಳದ ಯಾವ ಶಾಸನಗಳೂ ತಿಳಿಸುವುದಿಲ್ಲ. ಎರಡು ಶಾಸನಗಳಲ್ಲಿ

‘ಜಇನರಿಗೆಭಕ್ತರಿಗೆಸಂವಾದವಾದ’ ನಂತರದ ಪರಾಕಾಷ್ಠೆಯನ್ನು ಹೇಳಿ, ವೀರಬುಕ್ಕರಾಯ ಸೂಚಿಸಿದ ಪರಿಹಾರವನ್ನು ತಿಳಿಸುತ್ತವೆ (ಎಕ–2, 475; ಎಕ (ರೈ)–9 ಮಾಗಡಿ 18). ಎರಡು ಶಾಸನಗಳಲ್ಲಿ ಹೊಂದಿಕೆ ಆಗದೇ ಇರುವ ಮಹತ್ವದ ವಿಷಯವೆಂದರೆ. “ಜೈನರಿಗೂ ಭಕ್ತರಿಗೂ ಸಂವದವಾದಲ್ಲಿ ಆನೆಯಗೊಂದಿ, ಹೊಸಪಟ್ಟಣ ಪೆನುಗೊಂಡೆ, ಕಲ್ಯಹದಪಟ್ಟಣ ಒಳಗಾದ ಸಮಸ್ತನಾಡ ಜಇನರುಬುಕ್ಕರಾಯಮಗೆಭಕ್ತರು ಅನ್ಯಾಯದಲು ಕೊಲ್ಲುವದನುಬಿಂನಹಂಮಾಡಲಾಗಿ” (ಪೂರ್ವೋಕ್ತ: ಮಾಗಡಿ 18) ಎಂದು ಹೇಳಲಾಗಿದೆ.



ಬಹುಮುಖ್ಯವಾಗಿ ಶಾಸನದ ಪಾಠವನ್ನು ಗಮನಿಸಿದರೆ, ಜೈನರು ಮತ್ತು ಬಸದಿಗಳು ವೈಷ್ಣವರ ಕೃಪೆಯಲ್ಲಿರಬೇಕಾದ ಪರಿಸ್ಥಿತಿ ಉದ್ಭವವಾಗಿದ್ದಿತೆಂಬುದು ಸ್ಪಷ್ಟವಿದೆ. ಶಾಸನದಲ್ಲಿರುವಂತೆ ಜೈನರಿಗೆ ಶ್ರೀವೈಷ್ಣವರಿಂದ ಅನ್ಯಾಯ ಆಗಲು ಆನೆಯಗೊಂದಿ, ಹೊಸಪಟ್ಟಣ, ಪೆನುಗೊಂಡೆ, ಕಲ್ಯಹ ಪಟ್ಟಣಗಳ ಎಲ್ಲ (ಜೈನ) ಸಮಸ್ತ ಜನರು ನೇರವಾಗಿ ವಿಜಯನಗರದ ಅರಸ ಬುಕ್ಕರಾಯಂಗೆ ವೈಷ್ಣವರು ತಮ್ಮ ಮೇಲೆ ಮಾಡುತಿದ್ದ ಮಾರಣಾಂತಿಕ ಹಲ್ಲೆ(ಅನ್ಯಾಯದಲುಕೊಲ್ಲುವದನು; ಪೂರ್ವೋಕ್ತ: ಮಾಗಡಿ 18)ಯನ್ನು ಬಿಂನಹಂಮಾಡುತ್ತಾರೆ. ಈ ವಿಷಯ ಕುರಿತಂತೆ ಚಿದಾನಂದಮೂರ್ತಿ ಅವರು, ಕ್ರಿಸ್ತಶಕ 1336ರ ಸುಮಾರಿಗೆ ಜೈನರಿಗೂ ವೈಷ್ಣವರಿಗೂ ಘರ್ಷಣೆಗಳಾದವು, ಶ್ರೀವೈಷ್ಣವರೂ ಅವರ ಅನುಯಾಯಿಗಳಾದ ಬ್ರಾಹ್ಮಣೇತರ ವರ್ಗದ ಉಷ್ಣಮರೂ ಆ ಪ್ರದೇಶದಲ್ಲಿ ಅಲ್ಪಸಂಖ್ಯಾತರಾಗಿದ್ದ ಜೈನರು ಉತ್ಸವಗಳಲ್ಲಿ ಬಳಸುತ್ತಿದ್ದ ‘ಪಂಚಮಹಾವಾದ್ಯ’ಗಳ ‘ಕಲಶ’ಗಳ ಬಳಕೆಗೆ ವಿರೋಧವನ್ನು ವ್ಯಕ್ತಪಡಿಸಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡೂ ವರ್ಗದವರಿಗೆ ಜಗಳಗಳಾದವು. ಹೊಡೆದಾಟಗಳಾದವು, ಪರಸ್ಪರ ಕೊಲೆಗಳೂ ಆದವು. “ಬಹುಶಃ ಜೈನರ ಕೊಲೆಗಳಾದದ್ದು ಜಾಸ್ತಿಯಿರುವಂತಿದೆ” ಎಂದು ಹೇಳುತ್ತಾರೆ (ವಿ.ಕ. ದಿ.ಪ. ದಿನಾಂಕ 24–07–2011 ರವಿವಾರ ಪುಟ 6).

ಇಲ್ಲಿ ಚಿದಾನಂದಮೂರ್ತಿಯವರು ಬಹುಶಃ ಜೈನರ ಕೊಲೆಗಳಾದದ್ದು ಜಾಸ್ತಿಯಿರುವಂತಿದೆ ಎಂಬ ಹೇಳಿಕೆಗಳನ್ನು ನೀಡುತ್ತಾರೆ. ಆದರೆ ಶಾಸನದಲ್ಲಿನ ಮಾಹಿತಿಯ ಬಗೆಗೆ ಸಂಶೋದಕರು ಊಹಾತ್ಮಕ ಮಾಹಿತಿಯನ್ನು ನೀಡುತ್ತಿದ್ದಾರೆ ಅನಿಸುತ್ತದೆ. ಅಂದರೆ ಘಟನೆ ಸಂಬಂಧಿಸಿದ ಶಾಸನದಲ್ಲಿ ಉಲ್ಲೇಖಿತಗೊಂಡಂತೆ, ವೈಷ್ಣವರು ಜೈನರ ಮೇಲೆ ಹೇಗೆ ಕೊಲ್ಲುವ (ಅನ್ಯಾಯದಲುಕೊಲ್ಲುವದನು; ಪೂರ್ವೋಕ್ತ: ಮಾಗಡಿ 18) ಕ್ರಿಯೆಗೆ ಇಳಿದರೋ ಹಾಗೆಯೇ ಜೈನರಿಂದ ವೈಷ್ಣವರ ಕೊಲೆಗಳು ನಡೆದಿವೆ ಎಂಬುದು ಚಿದಾನಂದಮೂರ್ತಿ ಅವರ ಅಭಿಪ್ರಾಯವಿದ್ದಂತಿದೆ. ಯಾವುದೇ ರಾಜಪ್ರಭುತ್ವದಲ್ಲಿ ಆಡಳಿತವು ಯಾವ ಧರ್ಮೀಯ ಅರಸನಿರುತ್ತಾನೋ ಅವನು ತನ್ನ ಎಲ್ಲ ಧರ್ಮೀಯರನ್ನು ಹಾಗೂ ತನ್ನ ಧರ್ಮದ ಪರ ವಹಿಸಿಕೊಂಡು ತೀರ್ಪು ನೀಡುವುದು ಸಾಮಾನ್ಯಜ್ಞಾನ ಮತ್ತು ಇಡೀ ಚರಿತ್ರೆಯು ಅದನ್ನೆ ಎತ್ತಿತೋರಿಸುತ್ತದೆ. ಇಂದಿನ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳೇ ಆಡಳಿತ ನಡೆಸುವ ಪ್ರಜಾಪ್ರಭುತ್ವದಲ್ಲಿಯೇ ಇಂತಹ ತಂತ್ರ–ಕುತಂತ್ರಗಳನ್ನು ನಮ್ಮನ್ನಾಳುವ ದೊರೆಗಳು ಪ್ರಜಾಪ್ರಭುತ್ವವು ಕಲ್ಪಿಸಿದ ಸಂವಿಧಾನದ ಯಾವ ಅಂಜಿಕೆಯಿಲ್ಲದೆ ಮಾಡುತ್ತಾರೆ. ಅದನ್ನು ರಾಜಪ್ರಭುತ್ವದಲ್ಲಿ ಮಾಡಲು ಯಾರ ಹಂಗು? ಇದೇ ಕೆಲಸವನ್ನು ಅಂದು ವೈಷ್ಣವರ ಪರವಾದ ರಾಜಪ್ರಭುತ್ವ ಇರುವಾಗ ಅರಸ ಬುಕ್ಕರಾಯ ಕೂಡ ವೈಷ್ಣವನಾಗಿರುವುದರಿಂದ ತನ್ನ ಧರ್ಮೀಯರ ಪರವಾದ ನ್ಯಾಯವನ್ನು ನೀಡುತ್ತಾನೆ. ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಹೇಗೆ ಕಲ್ಯ ಶಾಸನದಲ್ಲಿರುವ ‘ಅನ್ಯಾಯದಲುಕೊಲ್ಲುವದನು’ ಎಂಬ ಹೇಳಿಕೆಯನ್ನು

ಶ್ರವಣಬೆಳಗೊಳದ ಶಾಸನದಿಂದ ತೆಗೆದು ಹಾಕಲಾಗಿರುವುದು. ಹಾಗೇನಾದರೂ ಜೈನರಿಂದ ವೈಷ್ಣವರ ಕೊಲೆಗಳು ನಡೆದಿದ್ದರೆ, ಆ ವಿಷಯವನ್ನು ವೈಷ್ಣವರ ಮುಖಂಡರಾದ ತಾತಾಚಾರ್ಯರು ಇಲ್ಲಿ ಒತ್ತುಕೊಟ್ಟು ಬರೆಸಬಹುದಿತ್ತಲ್ಲವೆ? ಇದು ಕಲ್ಯದ ಪ್ರತಿಯಾಗಿದೆ. ಎರಡು ಶಾಸನಗಳಿಗೂ ಕನಿಷ್ಠ 5 ವಾರಗಳ ಅಂತರವಿದೆ. ಕಲ್ಯಹದ ಶಾಸನದಲ್ಲಿ ಹೇಳಲಾದ ಜೈನರ ಕೊಲೆ ಮಾಡಲಾಯಿತು ಎಂಬ ವಿಷಯವನ್ನು ಹಾಗೆ ವೈಷ್ಣವರ ಕೊಲೆ ಆದುದರ ಬಗ್ಗೆ ಶ್ರವಣಬೆಳಗೊಳ ಆಗಲಿ ಅಥವಾ ಕಲ್ಯಹದ ಶಾಸನಗಳಲ್ಲಿ ಒಂದು ಮಾತು ಬರುವುದಿಲ್ಲ. ಅಷ್ಟಕ್ಕೂ ಅರಸ ವೀರಬುಕ್ಕರಾಯನು ನೀಡಿದ ತೀರ್ಪು ಆದರೂ ಎಂತದ್ದು? ಚಿದಾನಂದಮೂರ್ತಿಯವರು ಬುಕ್ಕರಾಯನು ನೀಡಿದ ತೀರ್ಪು ಉದಾತ್ತವಾದದ್ದು ಎಂದು ಹೇಳುತ್ತಾರೆ.

'ವೈಷ್ಣವ ದರ್ಶನಕ್ಕೆಊ ಜೈನದರ್ಶನಕ್ಕೆಊ ಭೇದವಿಲ್ಲವೆಂದು' *ರಾಯನು ವೈಷ್ಣವರ ಕೈಯಲ್ಲಿ ಜೈನರ ಕೈವಿಡಿದುಕೊಟ್ಟು ಈ ಜೈನ ದರ್ಶನಕ್ಕೆ ಪೂರ್ವ ಮರ್ಯಾದೆಯಲು ಪಂಚ ಮಹಾವಾದ್ಯಂಗಳು ಕಲಶವು ಸಲುವುದು. ಜೈನ ದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು. ಈ ಮರ್ಯಾದೆಯಲು ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವನಿಟ್ಟು ಪಾಲಿಸುವರು. ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವಸಮಯವ ಜೈನದರ್ಶನವ ರಕ್ಷಿಸಿಕೊಂಡು ಬಹೆವು. ವೈಷ್ಣವರು ಜೈನರು ಒಂದು. ಭೇದವಾಗಿ ಕಾಣಲಾಗದು*(ಪೂರ್ವೋಕ್ತ) ಹಾಗೂ ಜೈನ ಬಸದಿಗಳಿಗೆ ಕಾವಲುಗಾರರನ್ನು ಹಾಕಲು ಪ್ರತಿ ಜೈನ ಕುಟುಂಬವೂ 'ಹಣ'ವನ್ನು ಪ್ರತಿವರ್ಷ ಪಾವತಿಸಬೇಕು. ಅದನ್ನು ಸಂಗ್ರಹಿಸಿ ವೈಷ್ಣವರ ಕೈಗೆ ನೀಡಬೇಕು. ಆ ಹಣದಲ್ಲಿ ಅವರು ಕಾವಲುಗಾರರನ್ನು ನೇಮಿಸುತ್ತಾರೆ ಎಂಬುದು ಬುಕ್ಕರಾಯನು ನೀಡಿದ ತೀರ್ಪು.

ಅರಸ ಬುಕ್ಕರಾಯನು ನೀಡಿದ ತೀರ್ಪಿನ ಪ್ರಕಾರ ನಾನು ಇಲ್ಲಿ ಕೆಲವೊಂದು ಅಂಶಗಳನ್ನು ಚರ್ಚಿಸಲೇಬೇಕಾದ ಅವಶ್ಯಕತೆ ಇದೆ. ಕಾರಣ ಚಿದಾನಂದಮೂರ್ತಿ ಅವರು ಈ ಜೈನ ಮತ್ತು ವೈಷ್ಣವರ ಮಧ್ಯದ ಸಂಘರ್ಷದಲ್ಲಿ ಅರಸ ಬುಕ್ಕರಾಯ ನೀಡಿದ ತೀರ್ಪು 'ಉದಾತ್ತ ತೀರ್ಪು' (ವಿ.ಕ.ದಿ.ಪ. ದಿನಾಂಕ 24–07–2011 ರವಿವಾರ ಪುಟ 6) ಎಂದು ಹೇಳಿದ್ದಾರೆ. ಹೇಗೆ ಇದು ಉದಾತ್ತ ತೀರ್ಪು ಎನ್ನುವ ಕಾರಣಕ್ಕಾಗಿ ಕೆಲವೊಂದು ಅಂಶಗಳನ್ನು ಹೀಗೆ ಚರ್ಚೆಗೆ ಎತ್ತಿಕೊಳ್ಳಬಹುದಾಗಿದೆ.

1. ವೈಷ್ಣವಧರ್ಮ ಜೈನಧರ್ಮಗಳಿಗೆ ತರತಮ ಭೇದವಿಲ್ಲ. ಪರಂಪರೆಯಿಂದ ಬಂದ ಪದ್ಧತಿಗನುಗುಣವಾಗಿ ಜೈನರ ಪಂಚಮಹಾವಾದ್ಯಗಳ ಬಳಕೆಗೆ, ಕಲಶ ಸ್ಥಾಪನೆಗೆ ವೈಷ್ಣವರು ಯಾವುದೇ ಅಡ್ಡಿ ಮಾಡಕೂಡದು.
2. ಜೈನಧರ್ಮೀಯರಿಗೆ ವೈಷ್ಣವರಿಂದ ಏನಾದರೂ ಹಾನಿಯಾದರೆ ಪ್ರತಿಯಾಗಿ ವೈಷ್ಣವ ದೇವಾಲಗಳಿಗೂ ಹಾನಿಯಾದಂತೆ ಮುಖ್ಯವಾಗಿ ಭಕ್ತ (ವೈಷ್ಣವರ) ರು ಜೈನ ಬಸದಿಗಳ ಮುಂದೆ ಅವುಗಳಿಗೆ ತಮ್ಮಿಂದ ಇನ್ನು ಮುಂದೆ ಯಾವುದೇ ಹಾನಿ ಮಾಡುವುದಿಲ್ಲ ಎಂಬ ಪ್ರಮಾಣ (ಪತ್ರ) ದ ಪ್ರತಿಜ್ಞೆಯ ಶಿಲಾಶಾಸನವನ್ನು ಬರೆಯಿಸಿ ಹಾಕಿಸಬೇಕು.

3. ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವ ರಕ್ಷಿಸಿಕೊಂಡು ಬಹೆವು (ಎಕ–2, 475). ಒಂದು ರಾಜ್ಯದ ರಾಜನಾಗಿ ಬುಕ್ಕರಾಯನು ಎರಡೂ ಮತಗಳನ್ನು ರಕ್ಷಿಸಲು ಬದ್ಧ ಎಂದು ಹೇಳಿರುವುದು.
4. ಜೈನ ಬಸದಿಗಳಿಗೆ ಕಾವಲುಗಾರರನ್ನು ಹಾಕಲು ಪ್ರತಿ ಜೈನ ಕುಟುಂಬವೂ 'ಹಣ'ವನ್ನು ಪ್ರತಿವರ್ಷ ಪಾವತಿಸಿದರೆ ಅದನ್ನು ಸಂಗ್ರಹಿಸಿದ ವೈಷ್ಣವರು ಆ ಹಣದಲ್ಲಿ ಕಾವಲುಗಾರರನ್ನು ನೇಮಿಸುತ್ತಾರೆ.



ಇಲ್ಲಿ ಬಸದಿಗಳ ಕಾವಲುಗಾರರ ನೇಮಕವನ್ನು ವೈಷ್ಣವರು ಮಾಡುವುದು. ಅದಕ್ಕೆ ತಗಲುವ ವೆಚ್ಚವನ್ನು ಜೈನರೂ ಮನೆಗೊಂದರಂತೆ ಹಣ ನೀಡಬೇಕು. ಈ ತೀರ್ಪುಗಳು ಸಂಶೋಧಕರ ದೃಷ್ಟಿಯಲ್ಲಿ 'ಉದಾತ್ತ ತೀರ್ಪು'ಗಳಾಗಿವೆ. ರಾಜನು ಜೈನರಿಗೂ ವೈಷ್ಣವರಿಗೂ ಸೇರಿಸಿ ಜೈನರ ಹಾನಿ ವೈಷ್ಣವರ ಹಾನಿಯಾದಂತೆ, ಅವರ ರಕ್ಷಣೆಯ ಹೊಣೆಯು ನಿಮ್ಮ ಮೇಲೆ ಎಂದು ಬಹುಸಂಖ್ಯಾತರಾದ ವೈಷ್ಣವರ ಮೇಲೆ ಜವಾಬ್ದಾರಿಯನ್ನು ಹೊರಿಸುವುದು, ಬುಕ್ಕರಾಯನ ರಾಜಕೀಯ ಚಾಣಾಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಇಂಥ ಅನಿವಾರ್ಯದ ನಿರ್ಧಾರಗಳು ರಾಜ ಬುಕ್ಕರಾಯನಿಗೆ ಆ ಸಂದರ್ಭದಲ್ಲಿ ಅವಶ್ಯಕವಾಗಿತ್ತು. ಇದು ಅವನ ಉದಾತ್ತ ರಾಜಕೀಯ ಬದುಕು ಎಂದು ಬೇಕಾದರೆ ಕರೆಯಬಹುದು.

ಅಲ್ಲದೇ, ಶಾಸನವನ್ನು ಬರೆಯಿಸುವ ಸಂದರ್ಭದಲ್ಲಿ, ಕಲ್ಯದಲ್ಲಿನ ಮೂಲಪ್ರತಿ ಹಾಕಿಸುವ ಸಂದರ್ಭದಲ್ಲಿ ಜೈನರ ಮುಖಂಡ ಭುವಿಸೆಟ್ಟಿಯ ಉಪಸ್ಥಿತಿ ಕಂಡುಬರುತ್ತದೆ. ಆದರೆ ಈ ಶಾಸನದಲ್ಲಿ ವೈಷ್ಣವರ ಮುಖಂಡ ತಾತಾಚಾರ್ಯನ ಅನುಪಸ್ಥಿತಿಯಾಗಿರುವ ಸಾಧ್ಯತೆ ಇದೆ. ಈ ಕಾರಣಕ್ಕೆ ಜೈನರು ಸೇರಿದಂತೆ ವೈಷ್ಣವರು ಬಹುಸಂಖ್ಯಾತರಾಗಿ ವಾಸಿಸುವ ಕಲ್ಯದಲ್ಲೇ ಭುವಿಸೆಟ್ಟಿಯು ನಡೆದ ಘಟನೆಯನ್ನು ಯಥಾವತ್ತಾಗಿ ಬರೆಸಿದ್ದಾನೆ. ನಂತರ ವೈಷ್ಣವರಿಗೆ ಅದು ತಿಳಿದು ಅದನ್ನು ತಿದ್ದುಪಡಿ ಮಾಡಿ, ಆ ಶಾಸನದ ಪ್ರತಿಮಾಡಿಸಿ ಬಹುಸಂಖ್ಯೆಯಲ್ಲಿ ಜೈನರು ವಾಸಿಸುವ ಶ್ರವಣಬೆಳಗೊಳದಲ್ಲಿ ಹಾಕಿಸುವ ಪ್ರಯತ್ನವನ್ನು ತಾತಾಚಾರ್ಯರ ಮೂಲಕ ಮಾಡಿರಬೇಕು. ಜೈನರಲ್ಲಿ ವೈಷ್ಣವರ ಬಗೆಗೆ ತಪ್ಪುಕಲ್ಪನೆ ಬರದಂತೆ 'ಅನ್ಯಾಯದಲುಕೊಲ್ಲುವದನು' ಎಂಬ ಬರೆಹದ ಅಂಶವನ್ನು ಅಳಿಸಿ ವ್ಯವಸ್ಥಿತವಾಗಿ ಪ್ರತಿಮಾಡಿಸಿ ಹಾಕಿಸಿರಬೇಕು. ಮುಖ್ಯವಾಗಿ ಗಮನಿಸಬೇಕಾದದ್ದು ಈ ಎರಡು ಶಾಸನಗಳಿಗೂ ಕನಿಷ್ಠ 5 ವಾರಗಳ ಅಂತರವಿದೆ.

ಈ ಮೇಲೆ ಉದಾಹರಿಸಿದ ಶಾಸನಗಳಲ್ಲಿನ ಅಂಶಗಳನ್ನು ಗಮನಿಸಿದರೆ ಅಲ್ಲಿಯ ವೈಷ್ಣವವರು ಕೆಳವರ್ಗದ ಜನಸಾಮಾನ್ಯರನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಂಡು ಅವರಿಂದ ಜೈನರ ಮೇಲೆ ಹಲ್ಲೆಗಳು ನಡೆಸಿರುವುದರ ಬಗ್ಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಕುರಿತಂತೆ ಮಾಗಡಿ ಶಾಸನದಲ್ಲಿ "ಸರಳ ಸಾತ್ವಿಕರು ಮೊಷ್ಟಿಕರು ತಿರುಮಣಿತಿರುವಡಿತಂದವುನಾಲ್ವತ್ತೆಂಟುತಲೆ ಮಕ್ಕಳುಸಾವಂತ ಭೋವರ್ಕ್ಗಳು ತಿರಿಕುಲಜಾಂಬವಕುಲವೊಳಗಾದಪದಿನೆಂಬುನಾಡಾ ಶ್ರೀವಇಷ್ಣವರಕಯ್ಯಲು ಮಹಾರಾಯನ.." (ಪೂರ್ವೋಕ್ತ) ಎಂದು ಹೇಳುತ್ತದೆ. ಅಂದರೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಶ್ರೀವೈಷ್ಣವ ಧರ್ಮದ ಪ್ರಚಾರದ ಸಂದರ್ಭದಲ್ಲಿ ಶೂದ್ರರಿಗೂ ವೈಷ್ಣವದೀಕ್ಷೆಯನ್ನು ನೀಡಿ ಅವರನ್ನು ವೈಷ್ಣವ ಧರ್ಮಾನುಯಾಯಿಗಳನ್ನಾಗಿ ಮಾಡಿಕೊಳ್ಳಲಾಗಿತ್ತು. ಮುಂದೆ ಅವರನ್ನು ತಮ್ಮ ಹಿತಾಸಕ್ತಿಗೋಸ್ಕರ ಬಳಕೆ ಮಾಡಿಕೊಂಡ ವಿಚಾರವಾಗಿ ಮಾಹಿತಿ ನೀಡುತ್ತದೆ. ಬಹುಸಂಖ್ಯಾತರಾದ ವೈಷ್ಣವರು ರಾಜಪ್ರಭುತ್ವದ ಬೆಂಬಲದ ಮೂಲಕ

ಅಲ್ಪಸಂಖ್ಯಾತರಾದ ಜೈನರ ಮೇಲೆ ಭಯ ಹುಟ್ಟಿಸುವಂತಹ ಪ್ರಯತ್ನವನ್ನು ಮಾಡಿರುವುದು ಇಲ್ಲಿ ಗೋಚರವಾಗುತ್ತದೆ. ಇದು ಮಾಗಡಿ ಶಾಸನದಲ್ಲಿ ತಿಳಿಸಿರುವ ಕೆಳವರ್ಗಗಳನ್ನು ತಮ್ಮ ವಿರುದ್ಧದ ಧರ್ಮಗಳವರ ಮೇಲೆ ಘರ್ಷಣೆಗೆ ತಳ್ಳಿ ಅವರಿಂದ ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಂಡಿರುವುದು ಸತ್ಯ. ಇಂತಹ ಘಟನೆಗಳು ಎಲ್ಲ ಕಾಲಘಟ್ಟದಲ್ಲಿಯೂ ಜರುಗುತ್ತಿರುತ್ತವೆ. ತಮ್ಮ ವೈಯಕ್ತಿಕವಾದ ಸಮಸ್ಯೆಯನ್ನು ತಮ್ಮವರಲ್ಲದವರ ಸಮಸ್ಯೆಯೆಂಬಂತೆ ಸಾರ್ವತ್ರಿಕಗೊಳಿಸಿ ತಮ್ಮ ಕೆಲಸವನ್ನು ಮಾಡಿಕೊಳ್ಳುವ ಮೂಲಕ ಶೂದ್ರರಿಗೆ ಪ್ರತ್ಯಕ್ಷವಾಗಿ ಮಾಡುವ ವಂಚನೆಯ ಜಾಲ ಇದಾಗಿ ಕಂಡುಬರುತ್ತದೆ.



ಶ್ರವಣಬೆಳಗೊಳದಲ್ಲಿ ಪ್ರಾಬಲ್ಯವನ್ನು ಹೊಂದಿದ್ದ ಜೈನರನ್ನು ರಾಜಕೀಯ ಅಧಿಕಾರದ ತಂತ್ರಗಾರಿಕೆಯಿಂದ ನಿಯಂತ್ರಿಸುವ ಕೆಲಸ ಈ ಘಟನೆಗಳ ಮೂಲಕ ನಡೆದಿರುವುದು ತಿಳಿದುಬರುತ್ತದೆ. ಮತ್ತೊಮ್ಮೆ ಚಿದಾನಂದಮೂರ್ತಿ ಅವರ ಮಾತುಗಳನ್ನೇ ಉಲ್ಲೇಖಿಸುವುದಾದರೆ, ಆ ಘರ್ಷಣೆ ಬರೀ ಕಲ್ಯದಲ್ಲಿ ಮಾತ್ರವಲ್ಲ ಶ್ರವಣಬೆಳ್ಗೊಳವೂ ಸೇರಿದಂತೆ ಇಡೀ ಪ್ರದೇಶದಲ್ಲಿ ನಡೆದಿದೆ. ಶ್ರವಣಬೆಳ್ಗೊಳದ ಪಕ್ಕದಲ್ಲೇ ಇರುವ ಹಳೆಯ ಬೆಳ್ಗೊಳ ಊರಲ್ಲಿ ವೈಷ್ಣವ ದೇವಾಲಯ, ಜೈನ ಬಸದಿಗಳು ನಾಶವಾಗಿವೆ. ಕಲ್ಯದಲ್ಲಿ ಹದಿಮೂರನೆಯ ಶತಮಾನದ ಶಾಸನವಿರುವ ಭಗ್ನ ಪಾರ್ಶ್ವನಾಥ ವಿಗ್ರಹವಿದೆ. ಅಲ್ಲಿದ್ದ ಬಸದಿ ನಾಶವಾಗಿ ಹೋಗಿರಬೇಕು. ಆ ಊರಲ್ಲಿರುವ 'ಬಸದಿ ಗುಂಡಿ' ಎಂಬ ಪ್ರದೇಶದಲ್ಲಿ ಹಿಂದೆ ಹಲವು ಬಸದಿಗಳಿದ್ದವಂತೆ. ಸಮೀಪದಲ್ಲೇ ಜೈನ ಬಸದಿಯೊಂದರ ಮಾನಸ್ತಂಭ ಇದೆ (ಪೂರ್ವೋಕ್ತ). ಈ ಹೇಳಿಕೆಯಲ್ಲಿ ಹಾಗೂ ಮೇಲಿನ ಎರಡೂ ಶಾಸನಗಳಿಂದ ತಿಳಿದು ಬರುವ ಬಹುಮುಖ್ಯವಾದ ಅಂಶವೆಂದರೆ, ರಾಜನು ಉದಾತ್ತ ಭಾವನೆಯಿಂದ ಒಪ್ಪಂದ ಮಾಡಿಸಿದರೂ ಈ ಶಾಸನ ಸ್ಪಷ್ಟವಾಗಿ ಶ್ರೀವೈಷ್ಣವರ ಪ್ರಾಬಲ್ಯವನ್ನೂ ಜೈನರ ಕ್ಷೀಣ ಸ್ಥಿತಿಯನ್ನೂ ಎತ್ತಿ ತೋರಿಸುತ್ತದೆ.

**ಕೊನೆಯ ಮಾತುಗಳು**

ಕ್ರಿಸ್ತಶಕ 1320ರ ಗುಂಡ್ಲುಪೇಟೆ (ಎಕ–3, ಗುಂಪೇ 40) ಶಾಸನವೊಂದು ಜೈನರ ಮೇಲೆ ವೈಷ್ಣವರಿಂದ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಹೀಗೆ ಹಿಡಿದಿಟ್ಟಿದೆ. ಹೊಯ್ಸಳ ಬಲ್ಲಾಳನಿಂದ ಕೇತಯ ದಂಡನಾಯಕ ಗೊಮ್ಮಟಹಳ್ಳಿ ಮತ್ತು ಕಾಚಗಾವುಂಡನ ಮಾದೆಯ ಹಳ್ಳಿಗಳನ್ನು ಪಡೆದು ಅವುಗಳನ್ನು ರಾಘವದೇವನ ಮಗನಾದ ಶ್ರೀಕರಣ ನಾರಾಯಣ ದೇವಣ್ಣನಿಗೆ ಅಗ್ರಹಾರಗಳಾಗಿ ಪರಿವರ್ತಿಸಲು ನೀಡಿದ. ಹಾಗೆ ಅಗ್ರಹಾರವಾಗಿ ಪರಿವರ್ತಿಸಿ ಭಿನ್ನಗೋತ್ರದ ಬ್ರಾಹ್ಮಣರಿಗೆ ನೀಡಿ ಅದಕ್ಕೆ ರಾಘವಪುರವೆಂದು ತನ್ನ ತಂದೆಯ ಹೆಸರನ್ನು ಇಟ್ಟನು. ಇಲ್ಲಿ, ಆ ಹಳ್ಳಿಗೆ ಮೊದಲಿದ್ದ ಹೆಸರಾದ ಗೊಮ್ಮಟಹಳ್ಳಿ ಜೈನ ಸಂಬಂಧವಾದ ಹೆಸರಾಗಿದೆ. ಅದು ರಾಘವಪುರವಾಗಿ ವೈಷ್ಣವ ಸಂಬಂಧದ ಹೆಸರನ್ನು ಪಡೆದು ಇಂದಿಗೂ ಆ ಹೆಸರೇ ಉಳಿದು ಬಂದಿದೆ. ಜೈನರು ಆ ಕಾಲಕ್ಕೆ ದುರ್ಬಲರಾಗಿದ್ದುದರಿಂದ ಇಂಥ ಕಹಿ ಪ್ರಸಂಗಗಳನ್ನು ನುಂಗಿಕೊಂಡು ಎದುರಿಸುವ ಅನಿವಾರ್ಯತೆ ಒದಗಿಬಂದಿರಬೇಕು.

ಜೈನಧರ್ಮವು ತನ್ನ ಇಷ್ಟು ದೀರ್ಘವಾದ ಪಯಣದಲ್ಲಿ ಹಲವು ಘರ್ಷಣೆಗಳಿಗೆ ತನ್ನನ್ನು ಒಡ್ಡಿಕೊಂಡಿದೆ. ಅದರಲ್ಲೂ ಬೌದ್ಧರೊಂದಿಗೆ ಸ್ವಲ್ಪಮಟ್ಟಿಗೆ ಮೇಲುಗೈ ಸಾಧಿಸಿರುವುದನ್ನು ಬಿಟ್ಟರೆ, ಶೈವ ಹಾಗೂ ವೈಷ್ಣವರೊಂದಿಗೆ ಸುದೀರ್ಘ ಕಾಲದ ಸಂಘರ್ಷವನ್ನೇ ಮಾಡಬೇಕಾಗಿ ಬಂದಿತು. ಜೈನರು ಅಬ್ಬಲೂರಲ್ಲಿ

ನಡೆದ ಘಟನೆಯನ್ನು ಬಿಟ್ಟರೆ, ಅದು ಕಲ್ಯದ ಶಾಸನವು ತಿಳಿಸಿರುವಂತೆ ವೈಷ್ಣವರೊಂದಿಗೇ ಇರಬೇಕು. ಈ ಎರಡು ಬಹುಮುಖ್ಯವಾದ ಅಂಶಗಳನ್ನು ಬಿಟ್ಟರೆ ಮುಖಾಮುಖಿಯಾಗಿ ಬೇರೆ ಇನ್ನೆಲ್ಲಿಯೂ ಎದುರಿಸಿರುವ ಅಂಶಗಳು ಗೋಚರವಾಗುವುದಿಲ್ಲ. ಎಲ್ಲವೂ ರಾಜಪ್ರಭುತ್ವದೊಂದಿಗೆ ಧರ್ಮಪ್ರಭುತ್ವವು ಸಾಮ್ಯತೆಯನ್ನು ಸಾಧಿಸಿ ಬಹುಸಂಖ್ಯಾತ ಧರ್ಮಗಳು ಅಲ್ಪಸಂಖ್ಯಾತ ಧರ್ಮಗಳ ಮೇಲೆ ಘರ್ಷಣೆಗೆ ಇಳಿದಿರುವುದು ಇಡೀ ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ.

ಬುಕ್ಕರಾಯನ ನಂತರದಲ್ಲಿ ಕಲ್ಯ ಮತ್ತು ಶ್ರವಣಬೆಳಗೊಳದಲ್ಲಿನ ರೀತಿಯಲ್ಲಿ ಧಾರ್ಮಿಕ ಸಂಘರ್ಷವನ್ನು ಸೂಚಿಸುವ ಶಾಸನಗಳು ಕಂಡುಬರುವುದಿಲ್ಲ. ಹಾಗೆ ಕಂಡುಬರುವುದಿಲ್ಲ ಎಂದರೆ, ಕನ್ನಡನಾಡಿನಲ್ಲಿ ಎಲ್ಲರು ಸಮನ್ವಯದಿಂದಲೇ ಬದುಕಿದ್ದರು ಎಂದೇನೂ ಅಲ್ಲ. ತೀರ ಅತಿರೇಕದ ಧಾರ್ಮಿಕ ಘರ್ಷಣೆಗಳು ನಡೆದಂತಿಲ್ಲ. ಈ ರೀತಿಯ ಘಟನೆಗಳೂ ನಡೆದರೂ ದಾಖಲಾಗದೇ ಹೋಗಿರುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಶಾಸನಗಳಿಂದ ಬರುವ ಚಿತ್ರ, ಘರ್ಷಣೆಗಿಂತಲೂ ಸಮನ್ವಯದ ಶಾಂತಿಯುತ ಬದುಕಿನತ್ತ ಒಲಿದಿರುವುದು ಕಂಡುಬರುತ್ತದೆ. ಸಣ್ಣ ಪುಟ್ಟ ವೈಮನಸ್ಸುಗಳು ಧಾರ್ಮಿಕ ವಲಯದಲ್ಲಿ ಉಂಟಾಗಿರುವುದರ ಬಗ್ಗೆ ಹರಿಹರನ ಕಾಲದಲ್ಲಿನ ಶಾಸನ(ಎಕ–9, ಬೇಲೂರು 59) ಗಮನ ಸೆಳೆಯುತ್ತದೆ.

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಹ ಜೈನ ಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಯಂವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸದಸದಾ

ಈ ರೀತಿಯ ಶಾಸನಗಳು ಎಲ್ಲೋ ಒಂದು ರೀತಿಯಲ್ಲಿ ಧರ್ಮಗಳು ವೈಮನಸ್ಸು, ಸಣ್ಣ ಪುಟ್ಟ ಸಂಘರ್ಷಗಳಲ್ಲಿ ತೊಡಗಿರುವುದರ ಬಗೆಗೆ ಅನುಮಾನ ಬರುತ್ತದೆ. ಇಂಥ ಘಟನೆಗಳು ಪರಾಕಾಷ್ಠೆಗೆ ಹೋಗುವ ಮುನ್ನ ಸಣ್ಣಪ್ರಮಾಣದಲ್ಲಿಯೇ ಅಥವಾ ಮೊಳಕೆ ಸಂದರ್ಭದಲ್ಲಿ ಹತ್ತಿಕ್ಕುವ ಪ್ರಯತ್ನವನ್ನು ರಾಜಪ್ರಭುತ್ವವು ಮಾಡಿರುವುದು ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**


- ಎಪಿಗ್ರಫಿಯಾ ಕರ್ನಾಟಿಕಾ ಸಂಪುಟ 2, 3 ಮತ್ತು 9
- ದೇವಚಂದ್ರನ ರಾಜಾವಳಿ ಕಥೆ
- ವಿಜಯಕರ್ನಾಟಕ ದಿನಪತ್ರಿಕೆ
- ಮಾರ್ಗ ಸಂಪುಟ 4, ಕಲಬುರ್ಗಿ ಎಂ.ಎಂ.